# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೬೧<br>Volume - 161 | ಬೆಂಗಳೂರು, ಮಂಗಳವಾರ, ೧೧, ಆಗಸ್ಟ್, ೨೦೨೬ (ಶ್ರಾವಣ, ೨೦, ಶಕವರ್ಷ, ೧೯೪೮)<br>BENGALURU, TUESDAY, 11, AUGUST, 2026 ( SHRAVANA , 20, SHAKAVARSHA, 1948) | ಸಂಚಿಕೆ ೧೫೭<br>Issue 157 |
|---|---|---|


## ಭಾಗ ೫

## ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

**HIGH COURT OF KARNATAKA, BENGALURU**

**NOTIFICATION**

**No: HCRB/SDA - 4/2026 (RPC) DATED 11TH AUGUST 2026**

**Subject:** Recruitment to the post of Second Division Assistant under Residual Parent Cadre.

****

**LAST DATE FOR SUBMISSION OF ONLINE APPLICATION: 11.09.2026**

Online applications are invited from eligible candidates for filling the vacant post of Second Division Assistant under Residual Parent Cadre on the Establishment of High Court of Karnataka, Bengaluru by way of Direct Recruitment, as detailed below. Applications shall be submitted only online through the link provided on the official website of High Court of Karnataka i.e., https://judiciary.karnataka.gov.in from 13.08.2026 to 11.09.2026, 11:59 PM.

**Post : Second Division Assistant**

(1) Number of Vacancies : 18

(2) Pay Scale : ₹25,500 to ₹ 81,100 (Level - 4) with admissible allowances.

(3) Classification of vacancies:

<table>
<tr><th colspan="2">Category</th><th>Un-reserved</th><th>Women Candidate</th><th>Rural Candidate</th><th>Kannada Medium Student</th><th>Persons with benchmark disability</th><th>Persons displaced from project</th><th>Ex-servicemen</th><th>Transgender</th><th colspan="2">Total</th></tr>
<tr><td colspan="2">General Merit</td><td>2</td><td>3</td><td>3</td><td>-</td><td>1</td><td>-</td><td>-</td><td>-</td><td colspan="2">9</td></tr>
<tr><td colspan="2">Scheduled Caste (Category – A)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td>1</td><td rowspan="4">3</td></tr>
<tr><td colspan="2">Scheduled Caste (Category – B)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td>1</td></tr>
<tr><td rowspan="2">Scheduled Caste (Category – C)</td><td>Others</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td rowspan="2">1</td></tr>
<tr><td>MCB**</td><td>1</td><td>-</td><td>-</td><td>-</td><td>-</td><td>-</td><td>-</td><td>-</td></tr>
<tr><td colspan="2">Scheduled Tribe</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">Category - I</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">Category - II(A)</td><td>1</td><td>1</td><td>1</td><td>-</td><td>-</td><td>-</td><td>-</td><td>-</td><td colspan="2">3</td></tr>
<tr><td colspan="2">Category - II(B)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">Category - III(A)</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">Category - III(B)</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">Total</td><td>9</td><td>4</td><td>4</td><td>-</td><td>1</td><td>-</td><td>-</td><td>-</td><td colspan="2">18</td></tr>
</table>

Note: 1. (**) Indicates Most Backward Class.

2. The classification of vacancies is made on the basis of -

(a) Government Order No. SWD 515 PKV 2026 dated 08.05.2026,

(b) Government Order No. DPAR 02 SeHiMa 2026 dated 13.05.2026 and 25.05.2026.

(c) Government Order No. DPAR 02 SeHiMa 2023 dated 08.03.2023.

(d) The identification of vacancies for Persons with Benchmark Disability is made as per Government Order No. DPAR 149 SRR 2020 dated 25.09.2020 and the details is as under:

| Category | Horizontal Reservation Point | Nature of Disability |
|---|---|---|
| General Merit | Point No. 4 | Blindness and low vision |

(4) **Educational Qualification:**

Must possess a Degree in Science / Arts / Commerce / Business Management / Computer Applications / Business Administration of

recognized University with minimum of 55% marks in the aggregate for candidates belonging to General Category & Other Backward Categories and a minimum of 50% marks in the aggregate for candidates belonging to Scheduled Caste and Scheduled Tribes, with knowledge of operation of computers.

(5) **Age Limit:**

Minimum Age: 18 years

Maximum Age:

| Candidates belonging to | Maximum age Limit |
|---|---|
| General Merit | 35 + 5* years |
| Category - II(A) / II(B) / III(A) / III(B) of Other Backward Classes | 38 + 5* years |
| Scheduled Caste / Scheduled Tribe / Category – I of Other Backward Classes | 40 + 5* years |

(*) 5 years relaxation of age is provided to all categories of candidates as per Government order No. DPAR 262 SeNeNi 2025 dated 29.01.2026 as a one time measure.

(6) **Method of submitting Application**:

The Application fee prescribed is as under:

| Candidates belonging to | Application Fee |
|---|---|
| General Merit | Rs.350/- |
| Category - II(A) / II(B) / III(A) / III(B) of Other Backward Classes | Rs.350/- |
| Scheduled Caste / Schedule Tribe / Category – I of Other Backward Classes / Persons with Benchmark Disability. | Rs.200/- |

The Application fee shall be paid only through State Bank of India online payment gateway by Net Banking / Credit Card / Debit Card / UPI in the link as provided in online application.

Application submitted without payment of the prescribed fee will be rejected. The application fee, once paid, will not be refunded under any circumstances. Therefore, the candidates are advised to verify all particulars carefully before submitting the online application.

(7) **Mode of Selection:**

Selection of candidates will be made in accordance with

a) the High Court of Karnataka Service (Conditions of Service and Recruitment) Rules, 1973 as amended from time to time,

b) the High Court of Karnataka Service (Direct Recruitment by Selection) Rules, 1984 as amended from time to time,

c) relevant rules, orders, circulars, etc., relating to age, reservations, etc., which are in force

The Selection to the post of Second Division Assistant will be made on the basis of performance of the Competitive Test (duration of 90 minutes) and Interview as under:

| Sl. No. | Particulars | Maximum Marks | Minimum Marks for passing the test |
|---|---|---|---|
| 1. | English Essay | 30 | 20 |
| 2. | Translation from Kannada to English | 30 | 20 |
| 3. | Test of General Knowledge | 20 | 10 |
| 4. | Interview | 20 | 10 |
| Grand Total | | 100 Marks | 60 Marks |

Candidates will be called for the Competitive Test on the basis of the percentage of total marks secured in the qualifying examination in the order of merit in the ratio of 1:10 *(i.e., 10 candidates for each notified vacancy)* in each of the reserved category.

Note: If two or more candidates have secured equal percentage of total marks in the qualifying examination, the order of merit in respect of such candidates shall be fixed on the basis of their age, the person or persons older in age being placed higher in the order of merit.

The candidates will be called for interview in the order of merit from among the successful candidates in the Competitive Test in the ratio of 1:5 (i.e., 5 candidates for each notified vacancy) in each of the reserved category.

(8) **Probation:**

Appointed candidate will be initially on probation for a period of two years or for extended period, if necessary.

**Instructions to candidates before submitting online application:**

a. Candidates shall carefully read all the instructions before submitting the online application. Applications containing incorrect, false, or incomplete information are liable to be rejected.

b. Candidates claiming various reservations shall submit only one application by mentioning all the reservations claimed.

c. Candidates must compulsorily furnish a valid mobile number and e-mail ID. This authority will not be responsible if SMS or e-mail communications fail to reach the candidate.

d. Candidates shall upload their recent photograph and signature as per the following specifications:

   a) The Photograph of the candidate shall be in colour; measuring 5 cm × 3.6 cm; not exceeding 50 KB in size; in JPG format; with white background.

   b) The candidates shall ensure that the Photograph that is being uploaded shall not bear the signature of the candidate.

   c) The candidate on a white sheet shall sign in black ball-point pen and upload the scanned signature, which shall measure 2.5 cm × 7.5 cm; not exceeding 25 KB in size; and shall be in JPG format.

e. After filling all the required particulars in the online application and uploading all relevant documents, the candidate shall pay the prescribed application fee as instructed. Thereafter, the candidate shall download and retain a copy of the submitted application and the online fee payment receipt until the completion of the recruitment process and produce the same whenever required.

f. The candidates can submit online application on the official website of High Court of Karnataka upto 11:59 PM on 11.09.2026.

g. Candidates are advised to submit the online applications well in advance and not to wait till the last date / last hour so as to avoid last minute rush.

h. Eligible candidates to the Competitive Test and Interview will be intimated in this regard. The list of candidates shortlisted for Competitive Test / Interview will also be published on the official website of High Court of Karnataka. Candidates shall attend the Competitive Test / Interview based on such notification.

i. Applications submitted through any mode other than the online application system will not be considered under any circumstances.

j. The candidates who are presently employed in Central Government, State Government, or any Public Sector Undertaking shall indicate correctly with regard to their in-service status at the relevant column in online application and if selected, shall produce No Objection Certificate (NOC) as per Rule 11 of the Karnataka Civil Services (General Recruitment) Rules, 1977 (as amended).

k. (i) Candidates claiming reservation under any category shall possess the requisite certificates issued by the competent authority.

(ii) Candidates claiming reservation of Rural Candidate under the General Merit category shall possess Certificate in Form-2 along with Form-1.

(iii) The Caste and Income certificate should have been obtained for Employment Purpose. The caste certificate issued for Education purpose or for obtaining benefits from schemes will not be considered.

l. Candidates claiming reservation as Ex-servicemen / Widow shall possess the certificates issued by the competent authority.

m. Candidates claiming reservation under Persons with Benchmark Disabilities (PwBD) category shall possess Disability Certificate issued by the Competent Authority.

n. Candidates shall possess all the relevant certificates issued by the competent authority on or before the last date prescribed for submission of the online application.

o. Candidates shall produce original documents relating to educational qualification, SSLC or equivalent examination certificate as a proof of date of birth, caste certificate and other reservation certificate as claimed, at the time of document verification. If any discrepancies are found in the online application and original documents submitted during verification of the documents, the candidate will be liable for cancellation of their candidature.

p. The information furnished by the candidate i.e., Caste / Reservations or any data in the online application will be final and any request for modification of the same will not be entertained under any circumstances.

q. The candidates called for Competitive Test and Interview will have to appear at their own cost at the place and time notified by High Court of Karnataka.

r. Merely attending the Competitive Test / Interview shall not confer any right to appointment and no candidate will be appointed to the post unless the

High Court of Karnataka is satisfied, after such enquiries as may be considered necessary that the candidate is suitable in all respects for appointment to the post.

s. The candidate appointed to the post of Second Division Assistant is liable to be posted at High Court of Karnataka, Principal Bench at Bengalury or Benches at Dharwad and Kalaburagi.

t. If any candidate attempts to obtain extraneous support by any means for candidature from any officials or non-officials, he / she will not be considered for appointment.

On verification, at any time or at any stage of recruitment, if it is found that the information furnished by the candidate in the application is false or the candidate does not fulfill any of the eligibility criteria and / or that he / she has suppressed / twisted or truncated any material facts, his / her candidature will stand cancelled. If any of these shortcomings is found even after appointment, his / her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution for furnishing such information.

**BY ORDER OF HON'BLE THE CHIEF JUSTICE,**

**Sd/-**
**(M.CHANDRASHEKAR REDDY)**
**REGISTRAR GENERAL**

## ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

### ಅಧಿಸೂಚನೆ

**ಸಂಖ್ಯೆ: HCRB/SDA – 4/2026 (RPC) ದಿನಾಂಕ 11ನೇ ಆಗಸ್ಟ್ 2026**

**ವಿಷಯ:** ಉಳಿದ ಮೂಲ ವೃಂದದ ಅಡಿಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಯ ಬಗ್ಗೆ.

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11.09.2026**

ಈ ಕೆಳಗಿನ ವಿವರಿಸಿರುವಂತೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಉಳಿದ ಮೂಲ ವೃಂದದ ಅಡಿಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಅಹ್ವಾನಿಸಲಾಗಿದೆ. 13.08.2026 ಯಿಂದ 11.09.2026 ರ ರಾತ್ರಿ 11:59ರವರೆಗೆ ಕರ್ನಾಟಕ ಉಚ್ಚನ್ಯಾಯಾಲಯದ ಅಧಿಕೃತ ವೆಬ್‌ಸೈಟ್ https://judiciary.karnataka.gov.in ನಲ್ಲಿ ಒದಗಿಸಲಾದ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**ಹುದ್ದೆ: ದ್ವಿತೀಯ ದರ್ಜೆ ಸಹಾಯಕರು**

(1) ಹುದ್ದೆಗಳ ಸಂಖ್ಯೆ : 18

(2) ವೇತನ ಶ್ರೇಣಿ : ₹25,500 to ₹ 81,100 (Level - 4) ಮತ್ತು ಇತರೆ ಭತ್ಯೆಗಳು.

(3) ಹುದ್ದೆಗಳ ವರ್ಗೀಕರಣ

<table>
<tr><th colspan="2">ಪ್ರವರ್ಗ</th><th>ಸಾಮಾನ್ಯ ಅರ್ಹತೆ</th><th>ಮಹಿಳಾ ಅಭ್ಯರ್ಥಿ</th><th>ಗ್ರಾಮೀಣ ಅಭ್ಯರ್ಥಿ</th><th>ಕನ್ನಡ ಮಾಧ್ಯಮ ಅಭ್ಯರ್ಥಿ</th><th>ಅಂಗವಿಕಲ ಅಭ್ಯರ್ಥಿ</th><th>ಯೋಜನಾ ನಿರಾಶ್ರಿತ ಅಭ್ಯರ್ಥಿ</th><th>ಮಾಜಿ ಸೈನಿಕ</th><th>ತೃತೀಯ ಲಿಂಗ</th><th colspan="2">ಒಟ್ಟು</th></tr>
<tr><td colspan="2">ಸಾಮಾನ್ಯ ಅಭ್ಯರ್ಥಿ</td><td>2</td><td>3</td><td>3</td><td>-</td><td>1</td><td>-</td><td>-</td><td>-</td><td colspan="2">9</td></tr>
<tr><td colspan="2">ಪರಿಶಿಷ್ಟ ಜಾತಿ (ಪ್ರವರ್ಗ – ಎ)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td>1</td><td rowspan="4">3</td></tr>
<tr><td colspan="2">ಪರಿಶಿಷ್ಟ ಜಾತಿ (ಪ್ರವರ್ಗ – ಬಿ)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td>1</td></tr>
<tr><td rowspan="2">ಪರಿಶಿಷ್ಟ ಜಾತಿ (ಪ್ರವರ್ಗ – ಸಿ)</td><td>ಇತರೆ</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td rowspan="2">1</td></tr>
<tr><td>ಅ.ಹಿಂ**</td><td>1</td><td>-</td><td>-</td><td>-</td><td>-</td><td>-</td><td>-</td><td>-</td></tr>
<tr><td colspan="2">ಪರಿಶಿಷ್ಟ ಪಂಗಡ</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">ಪ್ರವರ್ಗ–I</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">ಪ್ರವರ್ಗ–II (ಎ)</td><td>1</td><td>1</td><td>1</td><td>-</td><td>-</td><td>-</td><td>-</td><td>-</td><td colspan="2">3</td></tr>
<tr><td colspan="2">ಪ್ರವರ್ಗ–II (ಬಿ)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">ಪ್ರವರ್ಗ–III(ಎ)</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">ಪ್ರವರ್ಗ–III(ಬಿ)</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">ಒಟ್ಟು</td><td>9</td><td>4</td><td>4</td><td>-</td><td>1</td><td>-</td><td>-</td><td>-</td><td colspan="2">18</td></tr>
</table>

ಟಿಪ್ಪಣಿ:

1. (**) ಚಿಹ್ನೆ ಅತ್ಯಂತ ಹಿಂದುಳಿದ ವರ್ಗಕ್ಕೆಂದು ಸೂಚಿಸುತ್ತದೆ.

2. ಖಾಲಿ ಹುದ್ದೆಗಳ ವರ್ಗೀಕರಣವನ್ನು ಇವುಗಳ ಆಧಾರದ ಮೇಲೆ ಮಾಡಲಾಗಿದೆ –

   a) ಸರ್ಕಾರದ ಆದೇಶ ಸಂಖ್ಯೆ ಸಕಇ 515 ಪಕವಿ 2026 ದಿನಾಂಕ 08.05.2026.

   b) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2026 ದಿನಾಂಕ 13.05.2026 ಮತ್ತು 25.05.2026.

   c) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2023 ದಿನಾಂಕ 08.03.2023.

   d) ಅಂಗವಿಕಲ (Persons with benchmark disability) ವ್ಯಕ್ತಿಗಳ ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 149 ಎಸ್ಆರ್ಆರ್ 2020, ದಿನಾಂಕ 25.09.2020 ಯ ಪ್ರಕಾರ ಗುರುತಿಸಲಾಗಿದೆ.

| ಪ್ರವರ್ಗ | ಸಮತಳ ಬಿಂದುವಿನ ಸಂಖ್ಯೆ | ಷೆಡ್ಯೂಲ್‌ರನ್ವಯ ಗುರುತಿಸಲಾದ ಅಂಗವಿಕಲತೆ |
|---|---|---|
| ಸಾಮಾನ್ಯ ಅಭ್ಯರ್ಥಿ | 4ನೇ ಬಿಂದು | Blindness and low vision |

(4) **ವಿದ್ಯಾರ್ಹತೆ :**

ಅಭ್ಯರ್ಥಿಗಳು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ / ಕಲೆ / ವಾಣಿಜ್ಯ / ವ್ಯವಹಾರ ನಿರ್ವಹಣೆ (Business Management)/ ಕಂಪ್ಯೂಟರ್ ಅಪ್ಲಿಕೇಷನ್ಸ್ / ವ್ಯವಹಾರ ಆಡಳಿತ (Business Administration) ವಿಷಯಗಳ ಪದವಿಯಲ್ಲಿ, ಸಾಮಾನ್ಯ ವರ್ಗ ಮತ್ತು

ಇತರೆ ಹಿಂದುಳಿದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 55 ರಷ್ಟು ಅಂಕಗಳನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 50 ರಷ್ಟು ಅಂಕಗಳೊಂದಿಗೆ ಕಂಪ್ಯೂಟರ್ ನಿರ್ವಹಣಾ ಜ್ಞಾನವನ್ನು ಹೊಂದಿರತಕ್ಕದ್ದು.

(5) **ವಯೋಮಿತಿ :**

ಕನಿಷ್ಠ 18 ವರ್ಷ

ಗರಿಷ್ಠ ವಯೋಮಿತಿ:

| ಅಭ್ಯರ್ಥಿಯ ಪ್ರವರ್ಗ | ಗರಿಷ್ಠ ವಯೋಮಿತಿ |
|---|---|
| ಸಾಮಾನ್ಯ ಅಭ್ಯರ್ಥಿಗಳು | 35 + 5* ವರ್ಷಗಳು |
| ಇತರೇ ಹಿಂದುಳಿದ ಪ್ರವರ್ಗಗಳ – II(ಎ) / II(ಬಿ) / III(ಎ) / III(ಬಿ) | 38 + 5* ವರ್ಷಗಳು |
| ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ – I | 40 + 5* ವರ್ಷಗಳು |

(*) ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 262 ಸೆನೇನಿ 2025, ದಿನಾಂಕ 29.01.2026ರ ಪ್ರಕಾರ 5 ವರ್ಷಗಳ ವಯೋಮಿತಿಯನ್ನು ಒಂದು ಬಾರಿಯ ಕ್ರಮವಾಗಿ ನೀಡಲಾಗಿದೆ

(6) ಅರ್ಜಿ ಸಲ್ಲಿಸುವ ವಿಧಾನ

ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ:

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ವರ್ಗ | ರೂ.350/- |
| ಇತರೇ ಹಿಂದುಳಿದ ವರ್ಗಗಳ ಪ್ರವರ್ಗ – II(ಎ) / II(ಬಿ) / III(ಎ) / III(ಬಿ) | ರೂ.350/- |
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ– I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ (Persons with Benchmark Disability) | ರೂ.200/- |

ನಿಗದಿತ ಶುಲ್ಕವನ್ನು ವೆಬ್ ಸೈಟ್‌ನಲ್ಲಿ ನೀಡಲಾದ ಲಿಂಕ್ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ payment gateway by Net Banking / Credit Card / Debit Card / UPI ಸೌಲಭ್ಯದ ಮೂಲಕ ಪಾವತಿಸತಕ್ಕದ್ದು.

ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ. ಆದ್ದರಿಂದ ಎಲ್ಲಾ ಮಾಹಿತಿಗಳನ್ನು ಖಾತ್ರಿಪಡಿಸಿಕೊಂಡು ಅರ್ಜಿ ಸಲ್ಲಿಸತಕ್ಕದ್ದು.

**(7) ಆಯ್ಕೆ ವಿಧಾನ :**

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಗಿನ ನಿಯಮಗಳ ಅನುಸಾರ ಮಾಡಲಾಗುತ್ತದೆ–

ಎ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯದ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973,

ಬಿ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984,

ಸಿ) ವಯಸ್ಸು, ಮೀಸಲಾತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮಗಳು, ಆದೇಶಗಳು, ಸುತ್ತೋಲೆಗಳೂ, ಇತ್ಯಾದಿ.

ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ (90 ನಿಮಿಷಗಳ ಅವಧಿ) ಮತ್ತು ಸಂದರ್ಶನದ ಕಾರ್ಯಕ್ಷಮತೆಯ ಆಧಾರದ ಮೇಲೆ ಆಯ್ಕೆಯನ್ನು ಈ ಕೆಳಗಿನಂತೆ ಮಾಡಲಾಗುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಗರಿಷ್ಠ ಅಂಕಗಳು | ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು |
|---|---|---|---|
| 1 | ಆಂಗ್ಲ ಭಾಷೆಯಲ್ಲಿ ಪ್ರಬಂಧ | 30 | 20 |
| 2 | ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದ | 30 | 20 |
| 3 | ಸಾಮಾನ್ಯ ಜ್ಞಾನ ಪರೀಕ್ಷೆ | 20 | 10 |
| 4 | ಸಂದರ್ಶನ | 20 | 10 |
| | **ಒಟ್ಟು** | **100** | **60** |

ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಆಧಾರದ ಮೇಲೆ 1:10 ಅನುಪಾತದಂತೆ (ಅಂದರೆ ಅಧಿಸೂಚಿಸಲಾದ 1 ಹುದ್ದೆಗೆ 10 ಅಭ್ಯರ್ಥಿಗಳಂತೆ) ಅರ್ಹತಾ ಕ್ರಮದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಕರೆಯಲಾಗುವುದು.

ಟಿಪ್ಪಣಿ: ಅರ್ಹತಾ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಒಟ್ಟು ಅಂಕಗಳ ಶೇಕಡಾವಾರು ಸಮಾನತೆಯನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳ ವಿಷಯದಲ್ಲಿ ಅರ್ಹತೆಯನ್ನು, ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು, ಅರ್ಹತೆಯ ಕ್ರಮದಲ್ಲಿ ಅಧಿಸೂಚಿಸಿರುವ ಖಾಲಿ ಹುದ್ದೆಗಳ ಸಂಖ್ಯೆಗೆ ಐದು ಪಟ್ಟು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

**(8) ಪರಿವೀಕ್ಷಣೆ ಅವಧಿ:**

ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

**ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಅಭ್ಯರ್ಥಿಗಳಿಗೆ ಸೂಚನೆಗಳು**

a) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು. ತಪ್ಪಾದ, ಸುಳ್ಳು ಅಥವಾ ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

b) ವಿವಿಧ ಮೀಸಲಾತಿಗಳನ್ನು ಕೋರುವ ಅಭ್ಯರ್ಥಿಗಳು, ಎಲ್ಲಾ ಮೀಸಲಾತಿಯನ್ನು ಒಂದೇ ಅರ್ಜಿಯಲ್ಲಿ ನಮೂದಿಸಿ ಸಲ್ಲಿಸತಕ್ಕದ್ದು.

c) ಅಭ್ಯರ್ಥಿಗಳು ಕಡ್ಡಾಯವಾಗಿ ಮಾನ್ಯ ಹೊಂದಿರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಯನ್ನು ನಮೂದಿಸತಕ್ಕದ್ದು. SMS ಅಥವಾ ಇ–ಮೇಲ್ ಮುಖಾಂತರ ಅಭ್ಯರ್ಥಿಗಳಿಗೆ ಸಂದೇಶ ತಲುಪದಿದ್ದಲ್ಲಿ ಈ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.

d) ಅಭ್ಯರ್ಥಿಯು ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸತಕ್ಕದ್ದು:

(i) ಬಣ್ಣದ ಭಾವಚಿತ್ರವು ಇತ್ತೀಚಿನದ್ದಾಗಿದ್ದು ಅಳತೆಯಲ್ಲಿ 5 cm ಉದ್ದ × 3.6 cm ಅಗಲವುಳ್ಳದ್ದಾಗಿರಬೇಕು ಮತ್ತು 50KB ಅಳತೆಯದ್ದಾಗಿರಬೇಕು ಹಾಗು ಅದು jpg ನಮೂನೆಯಲ್ಲಿರಬೇಕು. ಭಾವಚಿತ್ರ ಹಿಂಬದಿಯು ಬಿಳಿ ಬಣ್ಣದ್ದಾಗಿರಬೇಕು.

(ii) ಅಪ್‌ಲೋಡ್ ಮಾಡಲಾದ ಭಾವಚಿತ್ರದಲ್ಲಿ ಅಭ್ಯರ್ಥಿಯ ಸಹಿ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

(iii) ಅಭ್ಯರ್ಥಿಯು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿ ಕಾಗದದ ಮೇಲೆ ಸಹಿಯನ್ನು ಮಾಡಿ (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಗಾತ್ರ) jpg ಸ್ವರೂಪದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು.

e) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಕೋರಲಾದ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ನಿಗದಿತ ಶುಲ್ಕ ಪಾವತಿಸಲು ಅರ್ಜಿಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು. ತದನಂತರ ಅರ್ಜಿಯನ್ನು ಹಾಗೂ ಆನ್‌ಲೈನ್‌ನಲ್ಲಿ ಶುಲ್ಕವನ್ನು ಪಾವತಿಸಿದ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರಗೂ ತಮ್ಮ ಹತ್ತಿರ ಕಾಯ್ದಿರಿಸಿಕೊಳ್ಳತಕ್ಕದ್ದು ಹಾಗೂ ಅಗತ್ಯವಿದ್ದಾಗಲೆಲ್ಲಾ ಹಾಜರು ಪಡಿಸತಕ್ಕದ್ದು.

f) ನ್ಯಾಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ನೋಂದಾಯಿಸಲು/ಸಲ್ಲಿಸಲು ದಿನಾಂಕ 11.09.2026 ರ ರಾತ್ರಿ 11:59ರವರೆಗೆ ಸಲ್ಲಿಸಬಹುದು.

g) ಅಭ್ಯರ್ಥಿಗಳು ಕೊನೆಯ ಕ್ಷಣದ ಒತ್ತಡವನ್ನು ತಪ್ಪಿಸಲು ಸಾಕಷ್ಟು ಮುಂಚಿತವಾಗಿಯೇ ಸಲ್ಲಿಸುವಂತೆ ಮತ್ತು ಕೊನೆಯ ದಿನಾಂಕ / ಕೊನೆಯ ಕ್ಷಣದವರೆಗೆ ಕಾಯದಿರುವಂತೆ ಸೂಚಿಸಲಾಗಿದೆ.

h) ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳಿಗೆ ಈ ಕುರಿತು ತಿಳಿಸಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

i) ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ವಿಧಾನದಲ್ಲಿ ಕಳುಹಿಸಿದ ಅರ್ಜಿಗಳನ್ನು ಯಾವುದೇ ಸಂದರ್ಭದಲ್ಲೂ ಪರಿಗಣಿಸಲಾಗುವುದಿಲ್ಲ.

j) ಅಭ್ಯರ್ಥಿಗಳು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ವಲಯದ ಉದ್ಯಮದಲ್ಲಿ ಪ್ರಸ್ತುತ ಉದ್ಯೋಗದಲ್ಲಿದ್ದರೆ, ಆನ್‌ಲೈನ್ ಅರ್ಜಿಯಲ್ಲಿ ಸಂಬಂಧಿತ ಕಾಲಂನಲ್ಲಿ ತಮ್ಮ ಸೇವೆಯ ಸ್ಥಿತಿಯ ಕುರಿತಾಗಿ ಸರಿಯಾದ ಮಾಹಿತಿಯನ್ನು ಒದಗಿಸಬೇಕು. ಒಂದು ವೇಳೆ

ಆಯ್ಕೆಯಾದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ತಿದ್ದುಪಡಿಯಾದ ನಿಯಮ 11ರ ಪ್ರಕಾರ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (NOC) ಒದಗಿಸತಕ್ಕದ್ದು.

k) (i) ಯಾವುದೇ ಪ್ರವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

(ii) ಗ್ರಾಮೀಣ ಪ್ರವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರಮಾಣ ಪತ್ರ ನಮೂನೆ–2ರ ಜೊತೆ ನಮೂನೆ–1ರಲ್ಲೂ ದೃಢೀಕರಣ ಪ್ರಮಾಣ ಪತ್ರವನ್ನು ಹೊಂದಿರಬೇಕು.

(iii) ಉದ್ಯೋಗಕ್ಕಾಗಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು. ಶಿಕ್ಷಣ ಅಥವಾ ಇತರೆ ಸೌಲಭ್ಯಗಳಿಗೆ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

l) ಮಾಜಿ ಸೈನಿಕರು / ವಿಧವೆ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

m) ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅಂಗವಿಕಲತೆಯ ಕುರಿತು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

n) ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳು ನೀಡಿದ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು.

o) ಅಭ್ಯರ್ಥಿಗಳು ಕೋರಿದ ಶೈಕ್ಷಣಿಕ ಅರ್ಹತೆ, ಜಾತಿ ಮತ್ತು ಇತರೆ ಮೀಸಲಾತಿಗಳಿಗೆ ಸಂಬಂಧಿಸಿದ ಅಪ್ ಲೋಡ್ ಮಾಡಲಾದ ಮೂಲದಾಖಲಾತಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಯಾವುದೇ ಅಭ್ಯರ್ಥಿ, ಸ್ಪರ್ಧಾತ್ಮಕ ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಅದನ್ನು ಸಲ್ಲಿಸಲು ವಿಫಲರಾದರೆ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿಕೆಯನ್ನು ರದ್ದುಗೊಳಿಸಲಾಗುತ್ತದೆ.

p) ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಲಾದ ವರ್ಗ / ಮೀಸಲಾತಿಗಳು ಅಂತಿಮವಾಗಿರುತ್ತದೆ. ನಂತರ ಬದಲಾವಣೆ ಕೋರಿದ್ದಲ್ಲಿ ಅಂತಹ ಕೋರಿಕೆಗಳನ್ನು ಯಾವುದೇ ಸಂದರ್ಭದಲ್ಲಿಯೂ ಪರಿಗಣಿಸಲಾಗುವುದಿಲ್ಲ.

q) ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು, ಕರ್ನಾಟಕ ಉಚ್ಚ ನ್ಯಾಯಾಲಯವು ನಿಗದಿಪಡಿಸುವ ಸ್ಥಳ ಹಾಗೂ ಸಮಯಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

r) ಸ್ಪರ್ಧಾತ್ಮಕ ಪರೀಕ್ಷೆ / ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಎಂದು, ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ಉಚ್ಚ ನ್ಯಾಯಾಲಯವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

s) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಲಾಗುವುದು.

t) ಅಭ್ಯರ್ಥಿಯು ಯಾವುದೇ ಸಿಬ್ಬಂದಿ ಅಥವಾ ಸಿಬ್ಬಂದಿಯೇತರರ ಮೂಲಕ ಉಮೇದುವಾರಿಕೆಗಾಗಿ ಯಾವುದೇ ವಿಧಾನದಿಂದ ಬಾಹ್ಯ ಬೆಂಬಲವನ್ನು ಪಡೆಯಲು ಪ್ರಯತ್ನಿಸಿದರೆ, ಅಂತಹ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

u) ಈ ಅಧಿಸೂಚನೆಯು ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ನಡುವೆ ಯಾವುದೇ ಅಸಂಗತತೆ ಉಂಟಾದರೆ, ಇಂಗ್ಲೀಷ್ ಆವೃತ್ತಿಯು ಮಾನ್ಯವಾಗಿರುತ್ತದೆ.

ಪರಿಶೀಲನೆಯ ಯಾವುದೇ ಸಮಯದಲ್ಲಿ ಅಥವಾ ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ನೇಮಕಾತಿಯ ನಂತರವೂ ಅಂತಹ ಯಾವುದೇ ನ್ಯೂನತೆಗಳು ಕಂಡುಬಂದರೆ, ಅಭ್ಯರ್ಥಿಯ ನೇಮಕಾತಿಯನ್ನು ರದ್ದುಗೊಳಿಸಲಾಗುವುದು. ತಪ್ಪು, ಅಪೂರ್ಣ ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸುವುದು ಅಭ್ಯರ್ಥಿಯ ಅನರ್ಹತೆಗೆ ಕಾರಣವಾಗುವುದಲ್ಲದೆ ಅಂತಹ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರರಾಗುತ್ತಾರೆ.

**ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳ ಆದೇಶಾನುಸಾರ,**

**ಸಹಿ/–**
**(ಎಂ. ಚಂದ್ರಶೇಖರ್ ರೆಡ್ಡಿ)**
**ಮಹಾವಿಲೇಖನಾಧಿಕಾರಿ**

**HIGH COURT OF KARNATAKA, BENGALURU**

**NOTIFICATION**

**No: HCRB/SDA - 5/2026 (KKR) DATED 11TH AUGUST 2026**

**Subject:** Recruitment to the post of Second Division Assistant under Kalyana Karnataka Region.

****

**LAST DATE FOR SUBMISSION OF ONLINE APPLICATION: 11.09.2026**

Online applications are invited from eligible candidates for filling the 02 Backlog Posts of Second Division Assistant under Kalyana Karnataka Region on the Establishment of High Court of Karnataka, Bengaluru by way of Direct Recruitment, as detailed below. Applications shall be submitted only online through the link provided on the official website of High Court of Karnataka i.e., https://judiciary.karnataka.gov.in from 13.08.2026 to 11.09.2026, 11:59 PM.

**<u>Post :</u> Second Division Assistant**

(1) Number of Vacancies : 02 Backlog Posts

(2) Pay Scale : ₹25,500 to ₹ 81,100 (Level - 4) with admissible allowances.

(3) Classification of vacancies:

| Category | Un-reserved | Women Candidate | Rural Candidate | Kannada Medium Student | Persons with benchmark disability | Persons displaced from project | Ex-servicemen | Transgender | Total |
|---|---|---|---|---|---|---|---|---|---|
| General Merit | - | - | - | - | - | - | - | - | - |
| Scheduled Caste | - | - | - | - | 1 | - | - | - | 1 |
| Scheduled Tribe | - | - | - | - | - | - | - | - | - |
| Category – I | - | - | - | - | - | - | - | - | - |
| Category - II(A) | - | - | - | - | 1 | - | - | - | 1 |
| Category - II(B) | - | - | - | - | - | - | - | - | - |
| Category - III(A) | - | - | - | - | - | - | - | - | - |
| Category - III(B) | - | - | - | - | - | - | - | - | - |
| Total | - | - | - | - | 2 | - | - | - | 2 |

Note: The identification of vacancies for Persons with Benchmark Disability is made as per Government Order No. DPAR 149 SRR 2020 dated 25.09.2020 and the details is as under:

| Category | Point No. and No. of post | Nature of Disability |
|---|---|---|
| Scheduled Caste | 1 Post<br>Horizontal Point No. 4 | Blindness and Low Vision |
| Category – II (A) | 1 Post<br>Horizontal Point No. 4 | Blindness and Low Vision |

(4) **Educational Qualification:**

Must possess a Degree in Science / Arts / Commerce / Business Management / Computer Applications / Business Administration of recognized University with minimum of 55% marks in the aggregate for candidates belonging to General Category & Other Backward Categories and a minimum of 50% marks in the aggregate for candidates belonging to Scheduled Caste and Scheduled Tribes, with knowledge of operation of computers.

(5) **Age Limit:**
Minimum Age: 18 years
Maximum Age:

| Candidates belonging to | Maximum age Limit |
|---|---|
| General Merit | 35 + 5* years |
| Category - II(A) / II(B) / III(A) / III(B) of Other Backward Classes | 38 + 5* years |
| Scheduled Caste / Scheduled Tribe / Category – I of Other Backward Classes | 40 + 5* years |

(*) 5 years relaxation of age is provided to all categories of candidates as per Government order No. DPAR 262 SeNeNi 2025 dated 29.01.2026 as a one time measure.

(6) **Method of submitting Application**:

The Application fee prescribed is as under:

| Candidates belonging to | Application Fee |
|---|---|
| General Merit | Rs.350/- |
| Category - II(A) / II(B) / III(A) / III(B) of Other Backward Classes | Rs.350/- |
| Scheduled Caste / Scheduled Tribe / Category – I of Other Backward Classes / Persons with Benchmark Disability. | Rs.200/- |

The Application fee shall be paid only through State Bank of India online payment gateway by Net Banking / Credit Card / Debit Card / UPI in the link as provided in online application.

Application submitted without payment of the prescribed fee will be rejected. The application fee, once paid, will not be refunded under any circumstances. Therefore, the candidates are advised to verify all particulars carefully before submitting the online application.

(7) **Mode of Selection:**

Selection of candidates will be made in accordance with

a) the High Court of Karnataka Service (Conditions of Service and Recruitment) Rules, 1973 as amended from time to time,

b) the High Court of Karnataka Service (Direct Recruitment by Selection) Rules, 1984 as amended from time to time,

c) relevant rules, orders, circulars, etc., relating to age, reservations, etc., which are in force

The Selection to the post of Second Division Assistant will be made on the basis of performance of the Competitive Test (duration of 90 minutes) and Interview as under:

| Sl. No. | Particulars | Maximum Marks | Minimum Marks for passing the test |
|---|---|---|---|
| 1. | English Essay | 30 | 20 |
| 2. | Translation from Kannada to English | 30 | 20 |
| 3. | Test of General Knowledge | 20 | 10 |
| 4. | Interview | 20 | 10 |
| Grand Total | | 100 Marks | 60 Marks |

Candidates will be called for the Competitive Test on the basis of the percentage of total marks secured in the qualifying examination in the order of merit in the ratio of 1:10 *(i.e., 10 candidates for each notified vacancy)* in each of the reserved category.

Note: If two or more candidates have secured equal percentage of total marks in the qualifying examination, the order of merit in respect of such candidates shall be fixed on the basis of their age, the person or persons older in age being placed higher in the order of merit.

The candidates will be called for interview in the order of merit from among the successful candidates in the Competitive Test in the ratio of 1:5 (i.e., 5 candidates for each notified vacancy) in each of the reserved category.

(8) **Probation:**

Appointed candidate will be initially on probation for a period of two years or for extended period, if necessary.

**Instructions to candidates before submitting online application:**

a. Candidates shall carefully read all the instructions before submitting the online application. Applications containing incorrect, false, or incomplete information are liable to be rejected.

b. Candidates claiming various reservations shall submit only one application by mentioning all the reservations claimed.

c. Candidates must compulsorily furnish a valid mobile number and e-mail ID. This authority will not be responsible if SMS or e-mail communications fail to reach the candidate.

d. Candidates shall upload their recent photograph and signature as per the following specifications:

   a) The Photograph of the candidate shall be in colour; measuring 5 cm × 3.6 cm; not exceeding 50 KB in size; in JPG format; with white background.

   b) The candidates shall ensure that the Photograph that is being uploaded shall not bear the signature of the candidate.

   c) The candidate on a white sheet shall sign in black ball-point pen and upload the scanned signature, which shall measure 2.5 cm × 7.5 cm; not exceeding 25 KB in size; and shall be in JPG format.

e. After filling all the required particulars in the online application and uploading all relevant documents, the candidate shall pay the prescribed application fee as instructed. Thereafter, the candidate shall download and retain a copy of the submitted application and the online fee payment receipt until the completion of the recruitment process and produce the same whenever required.

f. The candidates can submit online application on the official website of High Court of Karnataka upto 11:59 PM on 11.09.2026.

g. Candidates are advised to submit the online applications well in advance and not to wait till the last date / last hour so as to avoid last minute rush.

h. Eligible candidates to the Competitive Test and Interview will be intimated in this regard. The list of candidates shortlisted for Competitive Test / Interview will also be published on the official website of High Court of Karnataka. Candidates shall attend the Competitive Test / Interview based on such notification.

i. Applications submitted through any mode other than the online application system will not be considered under any circumstances.

j. The candidates who are presently employed in Central Government, State Government, or any Public Sector Undertaking shall indicate correctly with regard to their in-service status at the relevant column in online application and if selected, shall produce No Objection Certificate (NOC) as per Rule 11 of the Karnataka Civil Services (General Recruitment) Rules, 1977 (as amended).

k. Candidates claiming reservation under Scheduled Caste and Category-II(A) shall possess the requisite certificates issued by the competent authority. The Caste and Income certificate should have been obtained for Employment Purpose. The caste certificate issued for Education purpose or for obtaining benefits from schemes will not be considered.

l. Candidates claiming reservation under Persons with Benchmark Disabilities (PwBD) category shall possess Disability Certificate issued by the Competent Authority.

m. Kalyana Karnataka Region (371-J) certificate as prescribed under the Karnataka Public Employment (Reservation in Appointment for Hyderabad-Karnataka Region) (Issue of Eligibility Certificates) Rules, 2013.

n. Candidates shall possess all the relevant certificates issued by the competent authority on or before the last date prescribed for submission of the online application.

o. Candidates shall produce original documents relating to educational qualification, SSLC or equivalent examination certificate as a proof of date of birth, caste certificate and other reservation certificate as claimed, at the time of document verification. If any discrepancies are found in the online application and original documents submitted during verification of the documents, the candidate will be liable for cancellation of their candidature.

p. The information furnished by the candidate i.e., Caste / Reservations or any data in the online application will be final and any request for modification of the same will not be entertained under any circumstances.

q. The candidates called for Competitive Test and Interview will have to appear at their own cost at the place and time notified by High Court of Karnataka.

r. Merely attending the Competitive Test / Interview shall not confer any right to appointment and no candidate will be appointed to the post unless the High Court of Karnataka is satisfied, after such enquiries as may be considered necessary that the candidate is suitable in all respects for appointment to the post.

s. The candidate appointed to the post of Second Division Assistant is liable to be posted at High Court of Karnataka, Principal Bench at Bengalury or Benches at Dharwad and Kalaburagi.

t. If any candidate attempts to obtain extraneous support by any means for candidature from any officials or non-officials, he / she will not be considered for appointment.

On verification, at any time or at any stage of recruitment, if it is found that the information furnished by the candidate in the application is false or the candidate does not fulfill any of the eligibility criteria and / or that he / she has suppressed / twisted or truncated any material facts, his / her candidature will

stand cancelled. If any of these shortcomings is found even after appointment, his / her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution for furnishing such information.

**BY ORDER OF HON'BLE THE CHIEF JUSTICE,**

**Sd/-**
**(M.CHANDRASHEKAR REDDY)**
**REGISTRAR GENERAL**

## ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

## ಅಧಿಸೂಚನೆ

**ಸಂಖ್ಯೆ: HCRB/SDA – 5/2026 (KKR) ದಿನಾಂಕ 11ನೇ ಆಗಸ್ಟ್ 2026**

**ವಿಷಯ:** ಕಲ್ಯಾಣ ಕರ್ನಾಟಕ ಪ್ರದೇಶದ ಅಡಿಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಯ ಬಗ್ಗೆ.

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11.09.2026**

ಈ ಕೆಳಗಿನ ವಿವರಿಸಿರುವಂತೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ **02 ಉಳಿಕೆ** ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶದ ಅಡಿಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಅಹ್ವಾನಿಸಲಾಗಿದೆ. 13.08.2026 ಯಿಂದ 11.09.2026 ರ ರಾತ್ರಿ 11:59ರವರೆಗೆ ಕರ್ನಾಟಕ ಉಚ್ಚನ್ಯಾಯಾಲಯದ ಅಧಿಕೃತ ವೆಬ್‌ಸೈಟ್ https://judiciary.karnataka.gov.in ನಲ್ಲಿ ಒದಗಿಸಲಾದ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**ಹುದ್ದೆ: ದ್ವಿತೀಯ ದರ್ಜೆ ಸಹಾಯಕರು**

(1) ಹುದ್ದೆಗಳ ಸಂಖ್ಯೆ : **02 ಉಳಿಕೆ** ಹುದ್ದೆ

(2) ವೇತನ ಶ್ರೇಣಿ : ₹25,500 to ₹ 81,100 (Level - 4) ಮತ್ತು ಇತರೆ ಭತ್ಯೆಗಳು.

(3) ಹುದ್ದೆಗಳ ವರ್ಗೀಕರಣ

| ಪ್ರವರ್ಗ | ಸಾಮಾನ್ಯ ಅರ್ಹತೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಯೋಜನಾ ನಿರಾಶ್ರಿತ ಅಭ್ಯರ್ಥಿ | ಮಾಜಿ ಸೈನಿಕ | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | – | – | – | – | – | – | – | – | – |
| ಪರಿಶಿಷ್ಟ ಜಾತಿ | – | – | – | – | 1 | – | – | – | 1 |
| ಪರಿಶಿಷ್ಟ ಪಂಗಡ | – | – | – | – | – | – | – | – | – |
| ಪ್ರವರ್ಗ–I | – | – | – | – | – | – | – | – | – |

| | | | | | | | | | |
|---|---|---|---|---|---|---|---|---|---|
| ಪ್ರವರ್ಗ–II (ಎ) | – | – | – | – | 1 | – | – | – | 1 |
| ಪ್ರವರ್ಗ–II (ಬಿ) | – | – | – | – | – | – | – | – | – |
| ಪ್ರವರ್ಗ–III(ಎ) | – | – | – | – | – | – | – | – | – |
| ಪ್ರವರ್ಗ–III(ಬಿ) | – | – | – | – | – | – | – | – | – |
| ಒಟ್ಟು | – | – | – | – | 2 | – | – | – | 2 |

ಟಿಪ್ಪಣಿ: ಅಂಗವಿಕಲ (Persons with benchmark disability) ವ್ಯಕ್ತಿಗಳ ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 149 ಎಸ್ಆರ್ಆರ್ 2020, ದಿನಾಂಕ 25.09.2020 ಯ ಪ್ರಕಾರ ಗುರುತಿಸಲಾಗಿದೆ.

| ಪ್ರವರ್ಗ | ಹುದ್ದೆಗಳ ಸಂಖ್ಯೆ ಮತ್ತು ಸಮತಳ ಬಿಂದುಗಳ ಸಂಖ್ಯೆ | ಷೆಡ್ಯೂಲ್‌ರನ್ವಯ ಗುರುತಿಸಲಾದ ಅಂಗವಿಕಲತೆ |
|---|---|---|
| ಪರಿಶಿಷ್ಟ ಜಾತಿ | 1 ಹುದ್ದೆ 4 ನೇ ಬಿಂದು | Blindness and low vision |
| ಪ್ರವರ್ಗ–II (ಎ) | 1 ಹುದ್ದೆ 4 ನೇ ಬಿಂದು | Blindness and low vision |

(4) **ವಿದ್ಯಾರ್ಹತೆ :**

ಅಭ್ಯರ್ಥಿಗಳು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ / ಕಲೆ / ವಾಣಿಜ್ಯ / ವ್ಯವಹಾರ ನಿರ್ವಹಣೆ (Business Management)/ ಕಂಪ್ಯೂಟರ್ ಅಪ್ಲಿಕೇಷನ್ಸ್ / ವ್ಯವಹಾರ ಆಡಳಿತ (Business Administration) ವಿಷಯಗಳ ಪದವಿಯಲ್ಲಿ, ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 55 ರಷ್ಟು ಅಂಕಗಳನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 50 ರಷ್ಟು ಅಂಕಗಳೊಂದಿಗೆ ಕಂಪ್ಯೂಟರ್ ನಿರ್ವಹಣಾ ಜ್ಞಾನವನ್ನು ಹೊಂದಿರತಕ್ಕದ್ದು.

(5) **ವಯೋಮಿತಿ :**

ಕನಿಷ್ಠ 18 ವರ್ಷ

ಗರಿಷ್ಠ ವಯೋಮಿತಿ:

| **ಅಭ್ಯರ್ಥಿಯ ಪ್ರವರ್ಗ** | **ಗರಿಷ್ಠ ವಯೋಮಿತಿ** |
|---|---|
| ಸಾಮಾನ್ಯ ಅಭ್ಯರ್ಥಿಗಳು | 35 + 5* ವರ್ಷಗಳು |
| ಇತರೇ ಹಿಂದುಳಿದ ಪ್ರವರ್ಗಗಳ – II(ಎ) / II(ಬಿ) / III(ಎ) / III(ಬಿ) | 38 + 5* ವರ್ಷಗಳು |
| ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ – I | 40 + 5* ವರ್ಷಗಳು |

(*) ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 262 ಸೇನೆನಿ 2025, ದಿನಾಂಕ 29.01.2026ರ ಪ್ರಕಾರ 5 ವರ್ಷಗಳ ವಯೋಮಿತಿಯನ್ನು ಒಂದು ಬಾರಿಯ ಕ್ರಮವಾಗಿ ನೀಡಲಾಗಿದೆ.

(6) ಅರ್ಜಿ ಸಲ್ಲಿಸುವ ವಿಧಾನ

ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ:

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ವರ್ಗ | ರೂ.350/- |
| ಇತರೇ ಹಿಂದುಳಿದ ವರ್ಗಗಳ ಪ್ರವರ್ಗ – II(ಎ) / II(ಬಿ) / III(ಎ) / III(ಬಿ) | ರೂ.350/- |
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ (Persons with Benchmark Disability) | ರೂ.200/- |

ನಿಗದಿತ ಶುಲ್ಕವನ್ನು ವೆಬ್ ಸೈಟ್‌ನಲ್ಲಿ ನೀಡಲಾದ ಲಿಂಕ್ ಮೂಲಕ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ payment gateway by Net Banking / Credit Card / Debit Card / UPI ಸೌಲಭ್ಯದ ಮೂಲಕ ಪಾವತಿಸತಕ್ಕದ್ದು.

ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ. ಆದ್ದರಿಂದ ಎಲ್ಲಾ ಮಾಹಿತಿಗಳನ್ನು ಖಾತ್ರಿಪಡಿಸಿಕೊಂಡು ಅರ್ಜಿ ಸಲ್ಲಿಸತಕ್ಕದ್ದು.

**(7) ಆಯ್ಕೆ ವಿಧಾನ :**

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಗಿನ ನಿಯಮಗಳ ಅನುಸಾರ ಮಾಡಲಾಗುತ್ತದೆ–

ಎ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯದ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973,

ಬಿ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984,

ಸಿ) ವಯಸ್ಸು, ಮೀಸಲಾತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮಗಳು, ಆದೇಶಗಳು, ಸುತ್ತೋಲೆಗಳೂ, ಇತ್ಯಾದಿ.

ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ (90 ನಿಮಿಷಗಳ ಅವಧಿ) ಮತ್ತು ಸಂದರ್ಶನದ ಕಾರ್ಯಕ್ಷಮತೆಯ ಆಧಾರದ ಮೇಲೆ ಆಯ್ಕೆಯನ್ನು ಈ ಕೆಳಗಿನಂತೆ ಮಾಡಲಾಗುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಗರಿಷ್ಠ ಅಂಕಗಳು | ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು |
|---|---|---|---|
| 1 | ಆಂಗ್ಲ ಭಾಷೆಯಲ್ಲಿ ಪ್ರಬಂಧ | 30 | 20 |
| 2 | ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದ | 30 | 20 |
| 3 | ಸಾಮಾನ್ಯ ಜ್ಞಾನ ಪರೀಕ್ಷೆ | 20 | 10 |
| 4 | ಸಂದರ್ಶನ | 20 | 10 |
| | **ಒಟ್ಟು** | **100** | **60** |

ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಆಧಾರದ ಮೇಲೆ 1:10 ಅನುಪಾತದಂತೆ (ಅಂದರೆ ಅಧಿಸೂಚಿಸಲಾದ 1 ಹುದ್ದೆಗೆ 10 ಅಭ್ಯರ್ಥಿಗಳಂತೆ) ಅರ್ಹತಾ ಕ್ರಮದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಕರೆಯಲಾಗುವುದು.

ಟಿಪ್ಪಣಿ: ಅರ್ಹತಾ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಒಟ್ಟು ಅಂಕಗಳ ಶೇಕಡಾವಾರು ಸಮಾನತೆಯನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳ ವಿಷಯದಲ್ಲಿ ಅರ್ಹತೆಯನ್ನು, ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು, ಅರ್ಹತೆಯ ಕ್ರಮದಲ್ಲಿ ಅಧಿಸೂಚಿಸಿರುವ ಖಾಲಿ ಹುದ್ದೆಗಳ ಸಂಖ್ಯೆಗೆ ಐದು ಪಟ್ಟು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

(8) **ಪರಿವೀಕ್ಷಣೆ ಅವಧಿ:**

ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

**ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಅಭ್ಯರ್ಥಿಗಳಿಗೆ ಸೂಚನೆಗಳು**

a) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು. ತಪ್ಪಾದ, ಸುಳ್ಳು ಅಥವಾ ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

b) ವಿವಿಧ ಮೀಸಲಾತಿಗಳನ್ನು ಕೋರುವ ಅಭ್ಯರ್ಥಿಗಳು, ಎಲ್ಲಾ ಮೀಸಲಾತಿಯನ್ನು ಒಂದೇ ಅರ್ಜಿಯಲ್ಲಿ ನಮೂದಿಸಿ ಸಲ್ಲಿಸತಕ್ಕದ್ದು.

c) ಅಭ್ಯರ್ಥಿಗಳು ಕಡ್ಡಾಯವಾಗಿ ಮಾನ್ಯ ಹೊಂದಿರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಯನ್ನು ನಮೂದಿಸತಕ್ಕದ್ದು. SMS ಅಥವಾ ಇ–ಮೇಲ್ ಮುಖಾಂತರ ಅಭ್ಯರ್ಥಿಗಳಿಗೆ ಸಂದೇಶ ತಲುಪದಿದ್ದಲ್ಲಿ ಈ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.

d) ಅಭ್ಯರ್ಥಿಯು ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸತಕ್ಕದ್ದು:

   (i) ಬಣ್ಣದ ಭಾವಚಿತ್ರವು ಇತ್ತೀಚಿನದ್ದಾಗಿದ್ದು ಅಳತೆಯಲ್ಲಿ 5 cm ಉದ್ದ × 3.6 cm ಅಗಲವುಳ್ಳದ್ದಾಗಿರಬೇಕು ಮತ್ತು 50KB ಅಳತೆಯದ್ದಾಗಿರಬೇಕು ಹಾಗು ಅದು jpg ನಮೂನೆಯಲ್ಲಿರಬೇಕು. ಭಾವಚಿತ್ರ ಹಿಂಬದಿಯು ಬಿಳಿ ಬಣ್ಣದ್ದಾಗಿರಬೇಕು.

   (ii) ಅಪ್‌ಲೋಡ್ ಮಾಡಲಾದ ಭಾವಚಿತ್ರದಲ್ಲಿ ಅಭ್ಯರ್ಥಿಯ ಸಹಿ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

   (iii) ಅಭ್ಯರ್ಥಿಯು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿ ಕಾಗದದ ಮೇಲೆ ಸಹಿಯನ್ನು ಮಾಡಿ (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಗಾತ್ರ) jpg ಸ್ವರೂಪದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು.

e) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಕೋರಲಾದ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ನಿಗದಿತ ಶುಲ್ಕ ಪಾವತಿಸಲು ಅರ್ಜಿಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು. ತದನಂತರ ಅರ್ಜಿಯನ್ನು ಹಾಗೂ ಆನ್‌ಲೈನ್‌ನಲ್ಲಿ ಶುಲ್ಕವನ್ನು ಪಾವತಿಸಿದ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು

ನೇಮಕಾತಿ ಪ್ರಕ್ರಿಯೆ ಮುಗಿಯುವವರಗೂ ತಮ್ಮ ಹತ್ತಿರ ಕಾಯ್ದಿರಿಸಿಕೊಳ್ಳತಕ್ಕದ್ದು ಹಾಗೂ ಅಗತ್ಯವಿದ್ದಾಗಲೆಲ್ಲಾ ಹಾಜರು ಪಡಿಸತಕ್ಕದ್ದು.

f) ನ್ಯಾಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ನೋಂದಾಯಿಸಲು/ಸಲ್ಲಿಸಲು ದಿನಾಂಕ 11.09.2026 ರ ರಾತ್ರಿ 11:59ರವರೆಗೆ ಸಲ್ಲಿಸಬಹುದು.

g) ಅಭ್ಯರ್ಥಿಗಳು ಕೊನೆಯ ಕ್ಷಣದ ಒತ್ತಡವನ್ನು ತಪ್ಪಿಸಲು ಸಾಕಷ್ಟು ಮುಂಚಿತವಾಗಿಯೇ ಸಲ್ಲಿಸುವಂತೆ ಮತ್ತು ಕೊನೆಯ ದಿನಾಂಕ / ಕೊನೆಯ ಕ್ಷಣದವರೆಗೆ ಕಾಯದಿರುವಂತೆ ಸೂಚಿಸಲಾಗಿದೆ.

h) ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳಿಗೆ ಈ ಕುರಿತು ತಿಳಿಸಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

i) ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ವಿಧಾನದಲ್ಲಿ ಕಳುಹಿಸಿದ ಅರ್ಜಿಗಳನ್ನು ಯಾವುದೇ ಸಂದರ್ಭದಲ್ಲೂ ಪರಿಗಣಿಸಲಾಗುವುದಿಲ್ಲ.

j) ಅಭ್ಯರ್ಥಿಗಳು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ವಲಯದ ಉದ್ಯಮದಲ್ಲಿ ಪ್ರಸ್ತುತ ಉದ್ಯೋಗದಲ್ಲಿದ್ದರೆ, ಆನ್‌ಲೈನ್ ಅರ್ಜಿಯಲ್ಲಿ ಸಂಬಂಧಿತ ಕಾಲಂನಲ್ಲಿ ತಮ್ಮ ಸೇವೆಯ ಸ್ಥಿತಿಯ ಕುರಿತಾಗಿ ಸರಿಯಾದ ಮಾಹಿತಿಯನ್ನು ಒದಗಿಸಬೇಕು. ಒಂದು ವೇಳೆ ಆಯ್ಕೆಯಾದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ತಿದ್ದುಪಡಿಯಾದ ನಿಯಮ 11ರ ಪ್ರಕಾರ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (NOC) ಒದಗಿಸತಕ್ಕದ್ದು.

k) ಪರಿಶಿಷ್ಟ ಜಾತಿ ಮತ್ತು ಪ್ರವರ್ಗ II (ಎ) ಅಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡುವ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. ಉದ್ಯೋಗಕ್ಕಾಗಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು. ಶಿಕ್ಷಣ ಅಥವಾ ಇತರೆ ಸೌಲಭ್ಯಗಳಿಗೆ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ

l) ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅಂಗವಿಕಲತೆಯ ಕುರಿತು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

m) ಕಲ್ಯಾಣ ಕರ್ನಾಟಕ ಪ್ರದೇಶ – 371–ಜೆ ಪ್ರಮಾಣಪತ್ರವು ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶ ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರ ಅಡಿಯಲ್ಲಿ ಗೊತ್ತುಪಡಿಸಿದಂತೆ.

n) ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳು ನೀಡಿದ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು.

o) ಅಭ್ಯರ್ಥಿಗಳು ಕೋರಿದ ಶೈಕ್ಷಣಿಕ ಅರ್ಹತೆ, ಜಾತಿ ಮತ್ತು ಇತರೆ ಮೀಸಲಾತಿಗಳಿಗೆ ಸಂಬಂಧಿಸಿದ ಅಪ್ ಲೋಡ್ ಮಾಡಲಾದ ಮೂಲದಾಖಲಾತಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಯಾವುದೇ ಅಭ್ಯರ್ಥಿ, ಸ್ಪರ್ಧಾತ್ಮಕ ಪರೀಕ್ಷೆ / ಸಂದರ್ಶನ /

ಪರಿಶೀಲನೆಯ ಸಮಯದಲ್ಲಿ ಅದನ್ನು ಸಲ್ಲಿಸಲು ವಿಫಲರಾದರೆ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿಕೆಯನ್ನು ರದ್ದುಗೊಳಿಸಲಾಗುತ್ತದೆ.

p) ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಲಾದ ವರ್ಗ / ಮೀಸಲಾತಿಗಳು ಅಂತಿಮವಾಗಿರುತ್ತದೆ. ನಂತರ ಬದಲಾವಣೆ ಕೋರಿದ್ದಲ್ಲಿ ಅಂತಹ ಕೋರಿಕೆಗಳನ್ನು ಯಾವುದೇ ಸಂದರ್ಭದಲ್ಲಿಯೂ ಪರಿಗಣಿಸಲಾಗುವುದಿಲ್ಲ.

q) ಸ್ಪರ್ಧಾತ್ಮಕ ಪರೀಕ್ಷೆಗೆ / ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು, ಕರ್ನಾಟಕ ಉಚ್ಚ ನ್ಯಾಯಾಲಯವು ನಿಗದಿಪಡಿಸುವ ಸ್ಥಳ ಹಾಗೂ ಸಮಯಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

r) ಸ್ಪರ್ಧಾತ್ಮಕ ಪರೀಕ್ಷೆ / ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಎಂದು, ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ಉಚ್ಚ ನ್ಯಾಯಾಲಯವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

s) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಲಾಗುವುದು.

t) ಅಭ್ಯರ್ಥಿಯು ಯಾವುದೇ ಸಿಬ್ಬಂದಿ ಅಥವಾ ಸಿಬ್ಬಂದಿಯೇತರರ ಮೂಲಕ ಉಮೇದುವಾರಿಕೆಗಾಗಿ ಯಾವುದೇ ವಿಧಾನದಿಂದ ಬಾಹ್ಯ ಬೆಂಬಲವನ್ನು ಪಡೆಯಲು ಪ್ರಯತ್ನಿಸಿದರೆ, ಅಂತಹ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.

u) ಈ ಅಧಿಸೂಚನೆಯು ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ನಡುವೆ ಯಾವುದೇ ಅಸಂಗತತೆ ಉಂಟಾದರೆ, ಇಂಗ್ಲೀಷ್ ಆವೃತ್ತಿಯು ಮಾನ್ಯವಾಗಿರುತ್ತದೆ.

ಪರಿಶೀಲನೆಯ ಯಾವುದೇ ಸಮಯದಲ್ಲಿ ಅಥವಾ ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ನೇಮಕಾತಿಯ ನಂತರವೂ ಅಂತಹ ಯಾವುದೇ ನ್ಯೂನತೆಗಳು ಕಂಡುಬಂದರೆ, ಅಭ್ಯರ್ಥಿಯ ನೇಮಕಾತಿಯನ್ನು ರದ್ದುಗೊಳಿಸಲಾಗುವುದು. ತಪ್ಪು, ಅಪೂರ್ಣ ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸುವುದು ಅಭ್ಯರ್ಥಿಯ ಅನರ್ಹತೆಗೆ ಕಾರಣವಾಗುವುದಲ್ಲದೆ ಅಂತಹ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರರಾಗುತ್ತಾರೆ.

**ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳ ಆದೇಶಾನುಸಾರ,**

**ಸಹಿ/-**
**(ಎಂ. ಚಂದ್ರಶೇಖರ್ ರೆಡ್ಡಿ)**
**ಮಹಾವಿಲೇಖನಾಧಿಕಾರಿ**

**PR-61**